ಗಂಟಲುಕಟ್ಟಿತು ನೀರೂರಿ
ಸರಿಗಮ ಊದಲು ನೋಡಿದನು
ಗಗಗಗ ಸದ್ದನು ಮಾಡಿದನು
ಬಣ್ಣವು ನೀರಿನ ಪಾಲಾಯ್ತು
ಬಣ್ಣದ ತುತ್ತುರಿ ಬೋಳಾಯ್ತು

ಬಣ್ಣದ ತುತ್ತುರಿ ಹಾಳಾಯ್ತು
ಜಂಬದ ಕೋಳಿಗೆ ಗೋಳಾಯ್ತು

ತಮ್ಮ ಆಟಿಕೆಯೊಂದು ಕಳೆದುಹೋದಾಗ ಮಕ್ಕಳಿಗಾಗುವ ನೋವು ಎಂಥದೆಂಬುದನ್ನು ಈ ಕವಿತೆ ನವುರಾಗಿ ವರ್ಣಿಸುತ್ತಾ ಇದೆ. 'ತುತ್ತೂರಿ' ಪದ್ಯ ಓದಿದಾಗ ಮಕ್ಕಳ ಕಣ್ಣಲ್ಲಿ ನೀರು ಉಕ್ಕುವುದನ್ನು ನಾನು ನೋಡಿದ್ದೇನೆ. ನೋವಿನ ನವುರಾದ ಅನುಭವವನ್ನು ಮಕ್ಕಳಿಗೆ ಈ ಕವಿತೆ ನೀಡುತ್ತಾ ಇದೆ. ಭವಿಷ್ಯದ ಜೀವನ ಸಂಗ್ರಾಮಕ್ಕೆ ಮಕ್ಕಳನ್ನು ಸಿದ್ಧಪಡಿಸುವ ಕ್ರಮವಿದು. ಜೊತೆಗೆ ಮಕ್ಕಳು ತಮ್ಮ ಆಟಿಕೆಗಳನ್ನು ಇತರ ಮಕ್ಕಳೊಂದಿಗೆ ಹಂಚಿಕೊಂಡು ಸಂತೋಷಪಡಬೇಕೆಂಬ ಮರೆಮಾತೂ ಪದ್ಯದಲ್ಲಿದೆ. ಮಕ್ಕಳಿಗೆ ಸಹಜವಾದ ಎಲ್ಲವೂ ತನಗೇ ಬೇಕೆಂಬ ದೋಚುಬಾಕುತನದಿಂದ ನವುರಾದ ನೋವಿನ ಷಾಕ್ ಕೊಟ್ಟು ಅವರನ್ನು ಸಾಮೂಹಿಕ ಬದುಕಿಗೆ ಅಣಿಗೊಳಿಸುವ ಹುನ್ನಾರವೂ ಕವಿತೆಗೆ ಇದೆ. ಅದರೊಂದಿಗೆ ಕಾವ್ಯಭಾಷೆಯ ರಿಯಾಯ್ತಿಯ ಕಲ್ಪನೆಗಳನ್ನೂ ಮಕ್ಕಳಿಗೆ ಕಲಿಸುವಂತಿದೆ.

## ಅರ್ಧಚಂದ್ರ: ಕುವೆಂಪು

''ದೇವರ ಪೆಪ್ಪರಮೆಂಟೇನಮ್ಮ
ಗಗನದೊಳಲೆಯುವ ಚಂದಿರನು?
ಎಷ್ಟೇ ತಿಂದರು ಖರ್ಚೇ ಆಗದ
ಬೆಳೆಯುವ ಪೆಪ್ಪರಮೆಂಟೇನಮ್ಮಾ?

''ದಿನ ದಿನ ನೋಡುವೆ, ದಿನವೂ ಕರಗುತ
ಎರಡೇ ವಾರದೊಳಳಿಯುವುದು!
ಮತ್ತದು ದಿನ ದಿನ ಹೆಚ್ಚುತ ಬಂದು
ಎರಡೇ ವಾರದಿ ಬೆಳೆಯುವುದು!''

''ಅಕ್ಷಯವಾಗಿಹ ಪೆಪ್ಪರಮೆಂಟದು
ನನಗೂ ದೊರಕುವುದೇನಮ್ಮಾ?''
''ನೀನೂ ದೇವರ ಬಾಲಕನಾಗಲು
ನಿನಗೂ ಕೊಡುವನು ಕಂದಯ್ಯ!''

''ದೇವರ ಬಾಲಕನಾಗಲು ಒಲ್ಲೆ